ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).— ಮಾನ್ಯ ಶ್ರೀ ಬಾವುರಾವ್ ಹೇಳಿದ ಹಾಗೆ ಈಗ ತಾನೇ ನನಗೊಂದು ಟೆಲಿಗ್ರಾಂ ಬಂದಿದೆ. ಸಕಲೇಶಪುರದ ಅಧ್ಯಕ್ಷರ ಮೇಲೆ ಧಾಳಿ ಮಾಡಿರುವುದರಿಂದ ಅಲ್ಲಿ ಆ ಊರಿನಲ್ಲಿ ಉದ್ರೇಕ ನಿರ್ಮಾಣವಾಗಿದೆ, ಮತ್ತೆ ಮತ್ತೆ ಅಲ್ಲಿ ಕ್ಲಾಶಸ್ ಆಗುವ ಸಂಭವವಿರುವುದರಿಂದ ತಮ್ಮ ಮೂಲಕ ಸರ್ಕಾರದಲ್ಲಿ ಭಿನ್ನವಿಸಿಕೊಳ್ಳುವುದೇನೆಂದರೆ, ತಾವು ಈ ಟೆಲಿಗ್ರಾಂನ್ನು ಮುಖ್ಯಮಂತ್ರಿಗಳವರಿಗೆ ಕಳುಹಿಸಿ ಕೊಟ್ಟು ಅಲ್ಲಿ ಅವರಿಗೆ ಸೂಕ್ತ ರಕ್ಷಣೆ ಕೊಡಬೇಕೆಂದು ಹೇಳಿ ಅಲ್ಲಿಲಾ ಅಂಡ್ ಆರ್ಡರ್ ಸಿಚ್ಯುಯೇಷನ್ನು ತಹಬಂದಿಗೆ ತರಬೇಕೆಂದು ಹೇಳಬಯಸುತ್ತೇನೆ.

Extension of time to apply for seats in Medical Colleges.

SRI M. SRINIVAS.—Sir, I have sent a notice under Rule 312 regarding the extension of receipt of applications for Medical College since the result of B.Sc., of Mysore University has not yet been announced. The last date to file application is August 15. I request the Health Minister to extend the date of receipt of applications to Medical College.

SRI M. MALLAPPA.—A notification has been made calling for applications for admission to the Medical Colleges. Now the interview date is also fixed. We will have to see how far it is possible because the date is fixed on the advice of the Indian Medical College. I will try to examine it.

Requests to take up the Report on Mysore University Affairs for consideration.

ಶ್ರೀ ಜೆ. ಹೆಚ್. ಪಟೇಲ್ (ಚನ್ನಗಿರಿ).—ಸ್ವಾಮಿ, ನಿನ್ನೆ ದಿವಸ ನಾವು ಮೈಸೂರು ವಿಶ್ವವಿದ್ಯಾನಿಲಯದ ಘಟನೆಗಳ ಬಗ್ಗೆ ಏಕ ಸದಸ್ಯ ಆಯೋಗದ ವರದಿ ಏನು ಬಂದಿದೆ ಅದರ ಬಗ್ಗೆ ಚರ್ಚೆ ಮಾಡಬೇಕು ಎನ್ನುವ ಬಗ್ಗೆ ೩-೪ ನಮೂನೆಯಲ್ಲಿ ಅದನ್ನು ನಾವು ಕಳುಹಿಸಿದ್ದೇವೆ ಅದನ್ನು ಕಾಲಿಂಗ್ ಅಟೆನ್‌ಷನ್ ಆಗಿಯಾದರೂ ತೆಗೆದುಕೊಳ್ಳಬಹುದು ೨½ ಗಂಟೆ ಡಿಸ್ಕಷನ್ ಆಗಿ ತೆಗೆದುಕೊಳ್ಳಬಹುದು. ಅಥವ ಮತ್ತೆ ಯಾವ ಒಂದು ಮಾರ್ಗದಲ್ಲಿ ತರಬೇಕೆಂದು ಅಧ್ಯಕ್ಷರನ್ನು ಕೇಳಿದ್ದಕ್ಕೆ ಅಧ್ಯಕ್ಷರವರು ನಾಳೆ ದಿವಸ ತಿಳಿಸುತ್ತೇನೆಂದು ಹೇಳಿದ್ದರು. ಅಲ್ಲಿ ಈಗ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಒಂದಲ್ಲ ಒಂದು ಕಾರಣದಿಂದ ಅಲ್ಲಿ ಲೇಟ್ ಆಗುವುದರಿಂದ ಇಲ್ಲಿಯ ಕೆಲಸವೇನೂ ಬಿದ್ದು ಹೋಗುವುದಿಲ್ಲ. ಈಗಾಗಲೇ ಅಲ್ಲಿಯ ವಿದ್ಯಾರ್ಥಿಗಳು ಮುಷ್ಕರ ಹೂಡಬೇಕಾಗುವ ಸಂದರ್ಭ ಬಂದಿದೆ ಏತಕ್ಕೆಂದರೆ ಇಂತಹ ವೈಸ್‌ಛಾನ್ಸಲರ್ ಅನ್ನು ಇಟ್ಟುಕೊಂಡು ನಾವು ಹೇಗೆ ಮುಂದುವರಿಯಬೇಕು ಅನ್ನುವುದನ್ನು ಆಲೋಚನೆ ಮಾಡುತ್ತಿದ್ದಾರೆ. ಇದಕ್ಕೆ ಇನ್ನೂ ಸಮಯ ಕೊಟ್ಟರೆ ಬಹಳ ಕಷ್ಟವಾಗುತ್ತದೆ.

MR. CHAIRMAN.—He did say this matter will be examined. Probably, I think the Speaker is seized of the issue. This requires to be discussed by the Business Advisory Committee. It may take some more time to examine this matter.

ಶ್ರೀ ಜೆ. ಹೆಚ್. ಪಟೇಲ್.—ಮೊದಲು ಅವರು ಆ ತರಹ ಹೇಳಲಿಲ್ಲಾ. ಈ ಪೋಷನ್‌ಗೂ ಮತ್ತು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ಗೂ ಏನೂ ಸಂಬಂಧವಿಲ್ಲಾ. ಬಿಸಿನೆಸ್ ಅಡ್ವೈಸರಿ ಕಮಿಟಿಯ ಕೆಲಸ ಈ ಸದನದ ಸಮಯವನ್ನು ಯಾವ ಯಾವ ವಿಷಯಕ್ಕೆ ಎಷ್ಟೆಷ್ಟು ಸಮಯ

ವಿನಿಯೋಗ ಮಾಡಬೇಕು ಅಂತ ಇದೆಯೇ ವಿನಾ ಮತ್ತೇನೂ ಇಲ್ಲ. ನಿನ್ನೆ ದಿವಸ ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದಾರೆ ; ನಾಳೆ ದಿವಸ ಹೇಳುತ್ತೇನೆ ಎಂದು. ಮಾನ್ಯ ವಿದ್ಯಾ ಸಚಿವರು ಈಗ ಇಲ್ಲೇ ಇರುವುದರಿಂದ ಯಾವ ದಿವಸ ಯಾವ ಹೊತ್ತಿಗೆ ಇದನ್ನು ತೆಗೆದುಕೊಳ್ಳುತ್ತೀರಾ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಬಿಸಿನೆಸ್ ಅಡ್ವೈಸರಿ ಕಮಿಟಿಯ ಒಂದು ಆಧಾರ ಇಟ್ಟುಕೊಂಡು ಮುಂದೆ ಇದನ್ನು ತಿಳಿಸುತ್ತೇನೆ ಎಂದು ಅವರು ಹೇಳಿದರು.

ಶ್ರೀ ಜೆ. ಹೆಚ್. ಪಟೇಲ್.—ಈ ವಿಷಯವನ್ನು ಯಾವಾಗ ತೆಗೆದುಕೊಳ್ಳುತ್ತೀರಾ ಎಂದು ಈಗಲಾದರೂ ಹೇಳಿ ಸ್ವಾಮಿ.

MR. CHAIRMAN.—I do remember this matter had come up for discussion and the Speaker said : 'I will consider this in the Business Advisory Committee meeting.'

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರ ವೇಗಕ್ಕಿಂತಲೂ ನೀವು ಇನ್ನೂ ವೇಗವಾಗಿ ಹೇಳುತ್ತಿದ್ದೀರಿ.

MR. CHAIRMAN.—I will examine it and let you know.

ಶ್ರೀ ಜೆ. ಹೆಚ್. ಪಟೇಲ್.—ಈಗ ಮಾನ್ಯ ವಿದ್ಯಾಮಂತ್ರಿಗಳು ಇದ್ದಾರೆ, ಅವರು ಏನಾದರೂ ಹೇಳುತ್ತಾರೇನು ?

MR. CHAIRMAN.—In view of the fact that Speaker has already said that the issue will be examied and it will be intimated to the House, you will bear with the Speaker that it will be examined.

ಶ್ರೀ ಜೆ. ಹೆಚ್. ಪಟೇಲ್. —ನನಗೆ ಅನಾವಶ್ಯಕವಾಗಿ ಈ ಸಭೆಯ ಸಮಯದನ್ನು ಕಳೆಯುವುದಕ್ಕೆ ಇಚ್ಛೆ ಇಲ್ಲ. ಈ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಈಗಾಗಲೇ ಒಂದು ವಾರ ಕಳೆದುಹೋಯಿತು. ಈ ಬಗ್ಗೆ ಒಂದು ನೋಟೀಸ್ ಅನ್ನು ಮಾನ್ಯ ಮುಳ್ಳೂರು ಆನಂದರಾಯರು ಮತ್ತು ಮಾನ್ಯ ವೈ. ರಾಮಕೃಷ್ಣ ಅವರು ಎಲ್ಲರೂ ಕಳುಹಿಸಿದ್ದಾರೆ. ಸುಮಾರು ೨೫-೩೦ ಜನ ನಾನಾ ರೀತಿಯಲ್ಲಿ ಇದನ್ನು ಕಳುಹಿಸಿದ್ದಾರೆ. ರಾಜಕೀಯ ಕಾರಣಗಳಿಂದ ಈ ರೀತಿ ಆಗುತ್ತಾ ಇದೆ. ಇಲ್ಲಿ ಅರಸರ ಆಡಳಿತ ನಡೆಯುತ್ತಾ ಇದೆ ಎಂದು ಹೇಳಬೇಕಾಗಿದೆ. ಮೊದಲು ಆಳತಕ್ಕಂಥಾ ಅರಸರೇ ಬೇರೆ, ಈಗ ಆಳತಕ್ಕಂಥಾ ಅರಸರೇ ಬೇರೆ ಆದುದರಿಂದ ಇದನ್ನು ತೆಗೆದುಕೊಳ್ಳುವುದಕ್ಕೆ ಎಷ್ಟು ಸಮಯಬೇಕಾಗುತ್ತದೆ ಅನ್ನುವುದನ್ನು ಹೇಳುತ್ತೀರಾ ?

(Many members stood up to speak)

MR. CHAIRMAN.—I will not permit anybody to speak ; Now, I will call upon the Hon. Minister to speak.

Replies due to notices from Members.

ಶ್ರೀ ಎಂ. ಎಂ. ನಡಾಫ್.—ನಾನು ೮ ದಿವಸದ ಹಿಂದೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಅನ್ನು ಕಳುಹಿಸಿಕೊಟ್ಟಿದ್ದೇನೆ.

ಛೇರ್ಮನ್‌ರವರು.—ಯಾವುದಾದರೂ ಆ ತರಹ ತಾವು ಕಳುಹಿಸಿಕೊಟ್ಟಿದ್ದರೆ ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಕೆ. ಪಿ. ಕರಿಬಸಪ್ಪ.—ಸ್ವಾಮಿ, ಬಾಗಲಕೋಟೆಯ ಒಂದು ಕಾರ್ಖಾನೆಯಲ್ಲಿ ೪೨ ಜನ ಕಾರ್ಮಿಕರನ್ನು ೧೯೭೨ನೇ ಇಸವಿಯಲ್ಲಿ ತೆಗೆದುಹಾಕಿದ್ದಾರೆ. ಅವರಿಗೆ ಇನ್ನೂ ವೇತನ ಸಿಕ್ಕಿಲ್ಲಾ ? ಈ ಬಗ್ಗೆ ನಾನು ಒಂದು ನೋಟೀಸ್ ಅನ್ನು ಕಳುಹಿಸಿದ್ದೇನೆ.